| | | | | | | | | | |
|---|---|---|---|---|---|---|---|---|---|
| 2,84,39,754 | ವಿಶ್ವದಲ್ಲಿ ಒಟ್ಟು ಸೋಂಕಿತರು | 1,71,792 | ಹೊಸ ಸೋಂಕು | 9,16,337 | ವಿಶ್ವದಾದ್ಯಂತ ಸಾವಿನ ಸಂಖ್ಯೆ | 2,04,61,482 | ಸೋಂಕಿನಿಂದ ಗುಣ ಮುಖರಾದವರು | 215 | ಕೊರೋನಾ ಸೋಂಕು ವ್ಯಾಪಿಸಿರುವ ದೇಶಗಳು |

# ಇತಿಹಾಸದಲ್ಲೇ ಮೊದಲ ಬಾರಿ ನಾಡಿದ್ದಿಂದ ವಿಭಿನ್ನ ಅಧಿವೇಶನ

## ಲೋಕಸಭೆ, ರಾಜ್ಯಸಭೆ ಕಲಾಪದ ವಿಧಾನವೇ ಬದಲು | ಎರಡೂ ಸದನ ಸೇರಿಸಿ ಒಮ್ಮೆ ಲೋಕಸಭೆ ಕಲಾಪ, ಇನ್ನೊಮ್ಮೆ ರಾಜ್ಯಸಭೆ

12/9/2020

**ನವದೆಹಲಿ:** ಕೊರೋನಾ ವೈರಸ್‌ನಿಂದಾಗಿ ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿ ವಿಭಿನ್ನ ಸ್ವರೂಪದಲ್ಲಿ ಸಂಸತ್ತಿನ ಅಧಿವೇಶನ ನಡೆಯಲು ಕ್ಷಣಗಣನೆ ಆರಂಭವಾಗಿದ್ದು, ಸೋಮವಾರದಿಂದ 18 ದಿನಗಳ ಕಲಾಪ ಆರಂಭಗೊಳ್ಳಲಿದೆ.

ವೈರಸ್ ಹರಡದಂತೆ ನೋಡಿಕೊಳ್ಳಲು ಸಂಸದರ ಆಸನದ ವ್ಯವಸ್ಥೆಯಿಂದ ಆರಂಭಿಸಿ ಕಲಾಪದ ವಿಧಾನದವರೆಗೆ ಎಲ್ಲವನ್ನೂ ಆಮೂಲಾಗ್ರ ಬದಲಾವಣೆ ಮಾಡಲಾಗಿದೆ. ಸಂಸದರು ದೂರ ದೂರ ಕುಳಿತುಕೊಳ್ಳಲು ಅನುಕೂಲವಾಗುವಂತೆ ಲೋಕಸಭೆ ಹಾಗೂ ರಾಜ್ಯಸಭೆಯ ಸಭಾಂಗಣವನ್ನು ಎರಡೂ ಸದನಗಳ ಕಲಾಪಕ್ಕೆ ಬಳಸಿಕೊಳ್ಳಲಾಗುತ್ತದೆ. ಮೊದಲ ದಿನವಾದ ಸೆ.14ರಂದು ಬೆಳಗ್ಗೆ 9ರಿಂದ 1ರವರೆಗೆ ಲೋಕಸಭೆಯ ಕಲಾಪ ನಡೆದರೆ, ಮಧ್ಯಾಹ್ನ 3ರಿಂದ 7ರವರೆಗೆ ರಾಜ್ಯಸಭೆ ಕಲಾಪ ನಡೆಯಲಿದೆ. ಮರುದಿನ ಬೆಳಗ್ಗೆ 9ರಿಂದ 1 ರಾಜ್ಯಸಭೆ ಕಲಾಪ ಮತ್ತು 3ರಿಂದ 7 ಲೋಕಸಭೆ ಕಲಾಪ ನಡೆಯಲಿದೆ. ಪ್ರಶ್ನೋತ್ತರ ಅವಧಿಯನ್ನು 30 ನಿಮಿಷಕ್ಕೆ ಇಳಿಸಲಾಗಿದೆ.

'ಕಲಾಪದಲ್ಲಿ ಪಾಲ್ಗೊಳ್ಳುವ ಎಲ್ಲ ಸಂಸದರು ಸೇರಿದಂತೆ ಸಂಸತ್ತಿನ ಎಲ್ಲ ನೌಕರರಿಗೆ ಕೊರೋನಾ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ. ಸಾಮಾಜಿಕ ಅಂತರ ಕಾಯ್ದುಕೊಂಡು ಸಂಸದರು ಕುಳಿತುಕೊಳ್ಳಲು ದೂರ-ದೂರ ಆಸನದ ವ್ಯವಸ್ಥೆ ಮಾಡಲಾಗಿದೆ. ಎರಡು ಆಸನಗಳ ನಡುವೆ ಫೈಬರ್ ಶೀಟ್ ಅಳವಡಿಸಲಾಗುವುದು. ಲೋಕಸಭೆಯ ಸಭಾಂಗಣದಲ್ಲಿ 257 ಮತ್ತು ವೀಕ್ಷಕರ ಗ್ಯಾಲರಿಯಲ್ಲಿ 172 ಸಂಸದರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ರಾಜ್ಯಸಭೆಯ ಸಭಾಂಗಣದಲ್ಲಿ 60 ಸಂಸದರಿಗೆ ಮತ್ತು ವೀಕ್ಷಕರ ಗ್ಯಾಲರಿಯಲ್ಲಿ 51 ಸಂಸದರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಉಭಯ ಸದನಗಳ ಕಲಾಪಗಳು ಒಂದಾದ ಮೇಲೆ ಒಂದರಂತೆ ಎರಡೂ ಸಭಾಂಗಣಗಳನ್ನು ಬಳಸಿಕೊಂಡು ನಡೆಯಲಿವೆ. ಎರಡೂ ಸದನಗಳಲ್ಲಿ ಇನ್ನೊಂದು ಸಭಾಂಗಣದ ಕಲಾಪ ವೀಕ್ಷಿಸಲು ಬೃಹತ್ ಪರದೆ ಅಳವಡಿಸಲಾಗಿದೆ. ಧ್ವನಿ ಎರಡೂ ಸದನದಲ್ಲಿ ಕೇಳಿಸುವಂತೆ ವ್ಯವಸ್ಥೆ ಮಾಡಲಾಗಿದೆ' ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ತಿಳಿಸಿದ್ದಾರೆ.



- ಸಾಮಾಜಿಕ ಅಂತರ, ಕೊರೋನಾ ಟೆಸ್ಟ್, ಆಸನಗಳ ಮಧ್ಯೆ ಫೈಬರ್ ಶೀಟ್
- ಸಂಸದರು ಪುಸ್ತಕದಲ್ಲಿ ಹಾಜರಿ ಹಾಕುವುದನ್ನು ತಪ್ಪಿಸಲು ಮೊಬೈಲ್ ಆ್ಯಪ್

ಸಂಸದರು ಹಾಜರಿ ನಮೂದಿಸಲು ಪುಸ್ತಕದ ಬದಲು ಮೊಬೈಲ್ ಆ್ಯಪ್ ಸಿದ್ಧಪಡಿಸಲಾಗಿದೆ. ಸಾಧ್ಯವಾದಷ್ಟು ಕಾಗದದ ಬಳಕೆ ಕಡಿಮೆ ಮಾಡಿ, ಡಿಜಿಟಲ್ ರೂಪದಲ್ಲಿ ವ್ಯವಹರಿಸಲು ಒತ್ತು ನೀಡಲಾಗಿದೆ. ವೀಕ್ಷಕರ ಗ್ಯಾಲರಿಯಲ್ಲಿ ಕುಳಿತ ಸಂಸದರು ತಮ್ಮ ಸರದಿ ಬಂದಾಗ ಪೋಡಿಯಂಗೆ ಹೋಗಿ ಮಾತನಾಡಬೇಕು ಎಂದೂ ಅವರು ಹೇಳಿದ್ದಾರೆ.

ಈ ಹಿಂದೆ ಪ್ರಶ್ನೋತ್ತರ ಅವಧಿಯನ್ನು ರದ್ದುಗೊಳಿಸಿತ್ತು. ಅದಕ್ಕೆ ಪ್ರತಿಪಕ್ಷಗಳಿಂದ ವಿರೋಧ ವ್ಯಕ್ತವಾದಾಗ ಅದನ್ನು ಅರ್ಧ ಗಂಟೆಗೆ ಇಳಿಸಿ, ಲಿಖಿತ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಗಿದೆ.

# ಈ ಬಾರಿ ವೈದ್ಯರ ರಕ್ಷಣೆ ಸುಗ್ರೀವಾಜ್ಞೆ ಸೇರಿ 23 ಮಸೂದೆ ಮಂಡನೆಗೆ ಸಿದ್ಧತೆ

**ನವದೆಹಲಿ:** 11 ಸುಗ್ರೀವಾಜ್ಞೆಗಳೂ ಸೇರಿದಂತೆ ಒಟ್ಟು 23 ಮಸೂದೆಗಳನ್ನು ಈ ಬಾರಿಯ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಮಂಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೊರೋನಾ ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯಕೀಯ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸುವುದನ್ನು ಜಾಮೀನುರಹಿತ ಅಪರಾಧವಾಗಿಸಿ 7 ವರ್ಷ ಜೈಲುಶಿಕ್ಷೆ ಮತ್ತು 5 ಲಕ್ಷ ರು. ದಂಡ ವಿಧಿಸುವ ಸುಗ್ರೀವಾಜ್ಞೆಯೂ ಸೇರಿದೆ.

ಸಂಸದರ ವೇತನ ಕಡಿತಗೊಳಿಸುವ ಸುಗ್ರೀವಾಜ್ಞೆ ಹಾಗೂ ಎಪಿಎಂಸಿಗಳ ಹೊರಗೂ ರೈತರಿಗೆ ತಮ್ಮ ಕೃಷ್ಯುತ್ಪನ್ನಗಳನ್ನು ಮಾರಾಟ ಮಾಡಲು ಅಧಿಕಾರ ನೀಡುವ ಸುಗ್ರೀವಾಜ್ಞೆಗಳು ಸಂಸತ್ತಿನಲ್ಲಿ ಮಂಡನೆಯಾಗಲಿರುವ ಇನ್ನೆರಡು ಪ್ರಮುಖ ಸುಗ್ರೀವಾಜ್ಞೆಗಳಾಗಿವೆ.

ಇವುಗಳಲ್ಲದೆ, ಜಮ್ಮು ಕಾಶ್ಮೀರಕ್ಕೆ ಉರ್ದು ಮತ್ತು ಇಂಗ್ಲಿಷ್ ಅಲ್ಲದೆ ಕಾಶ್ಮೀರಿ, ಡೋಗ್ರಿ ಮತ್ತು ಹಿಂದಿಯನ್ನೂ ಅಧಿಕೃತ ಭಾಷೆಯನ್ನಾಗಿಸುವ ಮಸೂದೆ, ಪೂರಕ ಅಂದಾಜುಗಳ ಮಸೂದೆ, ಬಹುರಾಜ್ಯಗಳ ಸಹಕಾರಿ ಸಂಘಗಳ ಮಸೂದೆ, ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಹೆಚ್ಚು ಕಾರ್ಯ[illegible] ನೀಡುವ ಮಸೂದೆ, ಮಾನವ ಮಲ ಹೊರುವ ಪದ್ಧತಿ ನಿಷೇಧಗೊಳಿಸುವ ಕಾಯ್ದೆಗೆ ತಿದ್ದುಪಡಿ ಮುಂತಾದ 12 ಹೊಸ ಮಸೂದೆಗಳೂ ಮಂಡನೆಯಾಗಲಿವೆ.